**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 200/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ ಎನ್ ಪುನೀತ್ |
| ತಂದೆಯ ಹೆಸರು | : | ನಿಂಗೇಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ರಾಜಗೋಪಾಲನಗರ ಪೊಲೀಸ್ ಠಾಣೆ, ಬೆಂಗಳೂರು |
| ವಾಸಸ್ಥಳ | : | ಕೋರಮಂಗಲ, ಬೆಂಗಳೂರು |

**ಸಾಕ್ಷಿಯನ್ನು ದಿನಾಂಕಃ 25.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ದಿನಾಂಕ 08.09.2018 ರಿಂದ 11.09.2019 ರವರೆಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 11.07.2019 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹಳ್ಳಿದಿಡ್ಡಿ ಗ್ರಾಮದಲ್ಲಿ ಸ್ವಾಮಿ ಎಂಬುವವರು ಅವರ ಮನೆಯ ಮುಂದೆ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನಾಧರಿಸಿ ನಾನು ಮತ್ತು ಸಿಬ್ಬಂದಿಗಳು ಸಂಜೆ 5.30 ಗಂಟೆಗೆ ಹಳ್ಳಿದಿಡ್ಡಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ದಾಳಿಯ ವಿಷಯ ತಿಳಿಸಿದಾಗ ಅವರು ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ ಎಲ್ಲರೂ ಸೇರಿ ಸಂಜೆ 6.00 ಗಂಟೆಗೆ ಸ್ವಾಮಿಯವರ ಮನೆಯ ಹತ್ತಿರ ಹೋಗಿ ನೋಡಲಾಗಿ

ಸದರಿ ಸ್ವಾಮಿ ತಮ್ಮ ಮನೆಯ ಮುಂದೆ ಬಿಳಿ ಬಣ್ಣದ ಚೀಲದಲ್ಲಿ ಮದ್ಯ ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ನಾವು ಕೂಡಲೇ ಹೋಗಿ ದಾಳಿ ಮಾಡಿ ಆ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನ ಹೆಸರು ಸ್ವಾಮಿ ಬಿನ್ ನಂಜುಂಡೇಗೌಡ, ಹಳ್ಳಿದಿಡ್ಡಿ ಗ್ರಾಮ ಎಂದು ಹೇಳಿರುತ್ತಾರೆ. ನಂತರ ಆತನ ಬಳಿಯಿದ್ದ ಚೀಲವನ್ನು ಪರಿಶೀಲಿಸಲಾಗಿ, ಅರಲ್ಲಿ 90 ಎಂ ಎಲ್ ನ ಓರಿಜಿನಲ್ ಡಿಲಕ್ಸ್ ವಿಸ್ಕಿಯ 112 ಮತ್ತು 90 ಎಂ ಎಲ್ ನ ರಾಯಲ್ ಲ್ಯಾನ್ಸರ್ ವಿಸ್ಕಿಯ 32 ಟೆಟ್ರಾ ಪ್ಯಾಕೇಟ್ ಗಳಿದ್ದವು. ನಂತರ ಪರವಾನಗಿ ಬಗ್ಗೆ ಕೇಳಿದಾಗ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ಸದರಿ ಟೆಟ್ರಾ ಪ್ಯಾಕೇಟ್ ಗಳನ್ನು ಯಾವ ಅಂಗಡಿಯಿಂದ ತಂದಿರುವುದಾಗಿ ಕೇಳಿದಾಗ ಹೆಬ್ಯಾ ಗ್ರಾಮದ ಮಹದೇವ್ ಎಂಬುವವರು ಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ಪಂಚನಾಮೆ ಜರುಗಿಸಿ, ಸ್ವತ್ತು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದಿರುಗಿ ಆರೋಪಿಯ ಸ್ವ-ಇಚ್ಛಾ ಹೇಳಿಕೆ ಪಡೆದುಕೊಂಡು ಸ್ವ-ವರದಿ ತಯಾರಿಸಿ, ಪ್ರಥಮ ವರ್ತಮಾನ ವರದಿ ದಾಖಲಿಸಿ ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿ.ಪಿ–1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–1(ಎ)** ಎಂದು ಗುರುತಿಸಲಾಯಿತು. ಸ್ವ–ವರದಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಸ್ವ–ವರದಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿ.ಪಿ–2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–2(ಎ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿ.ಪಿ–3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ–3(ಎ)** ಎಂದು ಗುರುತಿಸಲಾಯಿತು. ನಾನು ವಶಪಡಿಸಿಕೊಂಡ 144 ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು

ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ತನಿಖಾ ಸಮಯದಲ್ಲಿ ಚಾಸಾ–2 ರಿಂದ 8 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಂಡು, ನಂತರ ಕಡತವನ್ನು ಚಾಸಾ–11 ರವರಿಗೆ ವಹಿಸಿಕೊಟ್ಟಿರುತ್ತೇನೆ. ನಾನು ವಶಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ 112 ಓರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು ಮತ್ತು 32 ರಾಯಲ್ ಲ್ಯಾನ್ಸರ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು–1 ರಿಂದ 144 ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರುಹಾಜರಾಗಿದ್ದು, ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಆರೋಪಿಯ ಗುರುತಿಸುವಿಕೆಯ ಬಗ್ಗೆ ತಮ್ಮದೇನು ತಕರಾರು ಇಲ್ಲವೆಂದು ವ್ಯಕ್ತಪಡಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎನ್.ಎಂ.ಆರ್, ವಕೀಲರಿಂದಃ**

ಮಾಹಿತಿಯು ಬಾತ್ಮಿದಾರರಿಂದ ಬಂದಿರುತ್ತದೆ. ಮಾಹಿತಿಯು ಬಾತ್ಮಿದಾರರಿಂದ ಬಂದಿರುತ್ತದೆಂದು ಸ್ವ-ವರದಿಯಲ್ಲಿ ಹೇಳಿಲ್ಲ. ಮಾಹಿತಿಯು ಸಂಜೆ 5.00 ಗಂಟೆಗೆ ಬಂದಿರುತ್ತದೆ. ಹಳ್ಳಿದಿಡ್ಡಿ ಗ್ರಾಮಕ್ಕೆ ಸಂಜೆ 6.00 ಗಂಟೆಗೆ ಹೋಗಿರುತ್ತೇವೆ. ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಿಂದ ಹಳ್ಳಿದಿಡ್ಡಿ ಗ್ರಾಮಕ್ಕೆ ಸುಮಾರು 12 ಕಿ.ಮೀ. ದೂರವಿರುತ್ತದೆ ಎಂದರೆ ಸರಿ. ಠಾಣೆಯಿಂದ ಹಳ್ಳಿದಿಡ್ಡಿ ಗ್ರಾಮಕ್ಕೆ ಹೋಗಲು 30 ನಿಮಿಷ ಬೇಕಾಗುತ್ತದೆ. ನಾನು ಮತ್ತು ಸಿಬ್ಬಂದಿಗಳು ಸೇರಿ ಒಟ್ಟು 6 ಜನ ಹೋಗಿದ್ದೆವು. ನಾವು ಆರೋಪಿಯ ಮನೆಯ ಬಳಿಯಿರುವ ರಸ್ತೆಗೆ ಹೋಗಿದ್ದೆವು. ಸದರಿ ರಸ್ತೆಯಲ್ಲಿ ಪಂಚರು ಇದ್ದರು. ಪಂಚರಿಗೆ ನಾನು ನೋಟಿಸ್ ನೀಡಿರುತ್ತೇನೆ. ಪಂಚರಿಗೆ ಕೊಟ್ಟಿರುತ್ತೇನೆಂದು ಹೇಳಿರುವ ನೋಟಿಸ್ ನಲ್ಲಿ ದಿನಾಂಕ 11.07.2020 ಎಂದು ನಮೂದಿಸಲಾಗಿದೆ ಎಂದರೆ

ಕಣ್ತಪ್ಪಿನಿಂದ ಆಗಿರುತ್ತದೆ. ನಾವು ಹಳ್ಳಿದಿಡ್ಡಿ ಗ್ರಾಮದ ಯಾವ ಬೀದಿಗೆ ಹೋಗಿದ್ದೆವೆಂದು ಈಗ ನೆನಪಿಲ್ಲ. ನಾವು ಸುಮಾರು 100 ಅಡಿ ದೂರದಲ್ಲಿ ನಿಂತು ನೋಡಿದಾಗ ಆರೋಪಿ ಮದ್ಯದ ಪ್ಯಾಕೇಟ್ ಗಳನ್ನು ಇಟ್ಟುಕೊಂಡಿದ್ದರು. ಯಾವ ದಿಕ್ಕಿನಲ್ಲಿ ನಿಂತುಕೊಂಡು ನೋಡುತ್ತಿದ್ದೆವು ಎಂದು ಈಗ ನೆನಪಿಲ್ಲ. ನಾನು ನಿಂತು ನೋಡುವಾಗ ಆರೋಪಿ ಇದ್ದರು, ಬೇರೆ ಯಾರು ಇರಲಿಲ್ಲ. ನಾವು ಆರೋಪಿಯ ಮನೆಯೊಳಗೆ ಹೋಗಿರಲಿಲ್ಲ. ಆರೋಪಿಯ ಮನೆಯ ಅಕ್ಕ-ಪಕ್ಕದಲ್ಲಿ ಸುಮಾರು ಮನೆಗಳಿರುತ್ತವೆ ಎಂದರೆ ಸರಿ. ಆರೋಪಿಯ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇತ್ತು, ಆದರೆ ಆ ಚೀಲ ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಚೀಲದ ಉದ್ದ ಮತ್ತು ಅಳತೆ ಎಷ್ಟಿತ್ತು ಎಂದರೆ 50 ಕೆ.ಜಿ ತೂಕದ ಚೀಲವಾಗಿತ್ತು. ಸದರಿ ಚೀಲದಲ್ಲಿ 144 ಟೆಟ್ರಾ ಪ್ಯಾಕೇಟ್ ಗಳನ್ನು ಇಡಲಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಅಕ್ಕ-ಪಕ್ಕದ ಮನೆಯವರು ಸಾಕ್ಷಿದಾರರಾಗಬೇಕೆಂದು ನಾನು ಕೇಳಿಕೊಂಡಿರುವುದಿಲ್ಲ. ಗ್ರಾಮದವರನ್ನು ಕೂಡ ಸಾಕ್ಷಿದಾರರಾಗಬೇಕೆಂದು ಕೇಳಿಕೊಂಡಿಲ್ಲ. ಆರೋಪಿಯ ಮನೆ ಹೆಂಚಿನ ಮನೆಯಾಗಿತ್ತೋ ಅಥವಾ ತಾರಸಿ ಮನೆಯಾಗಿತ್ತೋ ನನಗೆ ನೆನಪಿಲ್ಲ. ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ರಸ್ತೆಯಲ್ಲಿ ಅವರ ಮನೆಯ ಮುಂದೆ ಇಟ್ಟುಕೊಂಡಿದ್ದರು. ಆರೋಪಿ ಪರಾರಿಯಾಗಲು ಪ್ರಯತ್ನಿಸಿದಾಗ ನಾವು ಹಿಡಿದುಕೊಂಡಿರುತ್ತೇವೆ. ಆರೋಪಿಗೆ ಒಂದು ಕಾಲು ಅಂಗವೈಕಲ್ಯತೆ ಇರುತ್ತದೆ. ನನಗೆ ಮಾಹಿತಿ ಇದ್ದುದರಿಂದ ಆರೋಪಿಯ ಮನೆ ನನಗೆ ಗೊತ್ತಾಗಿರುತ್ತದೆ. ಪಂಚರು ಮತ್ತು ನಾವು ರಸ್ತೆಯಿಂದ ನಡೆದುಕೊಂಡು ಹೋಗಿದ್ದೆವು. ಆರೋಪಿಯ ಅಂಗಶೋಧನೆ ಮಾಡಿರುವುದಿಲ್ಲ. ಈ ಹಿಂದೆ ಆರೋಪಿ ಟೆಟ್ರಾ ಪ್ಯಾಕೇಟ್ ಗಳನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ಯಾವುದೇ ದೂರುಗಳು ಬಂದಿರಲಿಲ್ಲ. ಮಹಜರ್ ನ್ನು ಸಂಜೆ 6.30 ರಿಂದ ರಾತ್ರಿ 8.00 ಗಂಟೆಯವರೆಗೆ ಸ್ಥಳದಲ್ಲಿ ಜರುಗಿರುತ್ತೇವೆ. ಆ ಸಮಯದಲ್ಲಿ ಕತ್ತಲೆಯಿದ್ದುದರಿಂದ ಇಲಾಖಾ ವಾಹನದ ಲೈಟ್ ನಿಂದ ಮಹಜರ್ ಮಾಡಿರುತ್ತೇವೆ. ಆ ದಿವಸ

ಆರೋಪಿ ಸ್ಥಳದಲ್ಲಿರಲಿಲ್ಲ ಮತ್ತು ಠಾಣೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸ್ವ-ಇಚ್ಚಾ ಹೇಳಿಕೆ ಪಡೆಯುವ ಸಮಯದಲ್ಲಿ ನೋಟಿಸ್ ನೀಡಿಲ್ಲ. ಮಹದೇವ ಯಾರು ಎಂದು ನಾನು ತನಿಖೆ ಮಾಡಿರುವುದಿಲ್ಲ. ಆರೋಪಿ ಯಾವ ಬಾರ್ ನಿಂದ ಪ್ಯಾಕೇಟ್ ಗಳನ್ನು ತಂದಿದ್ದರು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಅವರು ಯಾವ ಬಾರ್ ನಿಂದ ತಂದಿರುತ್ತೇನೆಂದು ತಿಳಿಸಿರುವುದಿಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ, ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಯಾವುದೇ ಮುದ್ದೆಮಾಲುಗಳನ್ನಾಗಲೀ, ಆರೋಪಿಯನ್ನಾಗಲೀ ವಶಕ್ಕೆ ಪಡೆದುಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ, ಆರೋಪಿಗು ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**